## 3

# “ನಿನಗೆ ನಿಜವಾಗಿಯೂ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?”

## (ಯೋಹಾನ 5:1-16)

ಯೋಹಾನ 5ರಲ್ಲಿ ಯೇಸು ವಿಚಿತ್ರವಾದ ಪ್ರಶ್ನೆಯನ್ನು ಕೇಳಿದನು. ರೋಗಿಯಾಗಿದ್ದ ಮನುಷ್ಯನ ಬಳಿಗೆ ಯೇಸು ಹೋಗಿ, “ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ”? ಎಂದು ಕೇಳಿದರು (ವ. 6). ಆ ಮನುಷ್ಯನು ಮೂವತ್ತೆಂಟು ವರ್ಷದಿಂದ ರೋಗಿಯಾಗಿದ್ದನೆಂದು ವ. 5 ಹೇಳುತ್ತದೆ - ಹಾಗೂ ಯೇಸು ಅವನಿಗೆ ಅವನು ನಿಜವಾಗಿಯು ಸ್ವಸ್ಥನಾಗಲಿಕ್ಕೆ ಮನಸ್ಸುಳ್ಳವನಾಗಿರುವನೋ ಎಂದು ಕೇಳಿದನು.

ಪ್ರಥಮ ನೋಟದಲ್ಲಿ, ಇದು ಇಂದು ಕೆಲವು ಸಲ ಕೇಳುವ ಪ್ರಶ್ನೆಗಳ ರೀತಿಯಲ್ಲಿ ಇರುವುದು: ಒಬ್ಬನು ಅಪಘಾತದ ಸ್ಥಳಕ್ಕೆ ಬರುವನು, ಸಂಪೂರ್ಣವಾಗಿ ಜಜ್ಜಲ್ಪಟ್ಟ ಕಾಲಿನ ಕಡೆಗೆ ನಡೆದು ಬರುವನು. ಒಳಗೆ ಭಯಂಕರವಾಗಿರುವ, ತಲೆಯ ಘಾಯಗಳಿಂದ ರಕ್ತ ಸುರಿಯುತ್ತಿರುವ, ಅಂಗಾಂಗಳು ಮುರಿದಿರುವ ಒಬ್ಬ ವ್ಯಕ್ತಿಯಿರುವನು. “ನೀನು ಸರಿಯಾಗಿದ್ದೀಯಾ?” ಎಂದು ಬಂದವನು ಕೇಳುವನು. ಒಬ್ಬ ಸ್ತ್ರೀ ಆಸ್ಪತ್ರೆಯ ಕೋಣೆ ಯೊಳಗೆ ಹೋಗುವಳು. ಆಕೆಯ ಸ್ನೇಹಿತ ತಲೆಯಿಂದ ಪಾದಗಳ ವರೆಗೆ ಬ್ಯಾಂಡೇಜು ಗಳಿಂದ ಸುತ್ತಲ್ಪಟ್ಟಿರುವನು. ಅವನ ಮುಖ ನೋವಿನಿಂದ ವಿಕಾರವಾಯಿತು. ಅವನ ದೇಹದಿಂದ ಆ ಕೋಣೆಯಲ್ಲಿಯ ಯಂತ್ರಗಳ ಕಡೆಗೆ ಹಲವಾರು ಟ್ಯೂಬುಗಳೂ ತಂತಿಗಳೂ ಇರವವು. “ನಿನಗೆ ನೋವಾಗುತ್ತದೋ?” ಎಂದು ಸ್ತ್ರೀ ಕೇಳುವಳು.

ಉದಾಹರಣೆಗಳನ್ನು ವೈಯಕ್ತಿಕವಾಗಿ ಮಾಡಿಕೊಳ್ಳೋಣ: ನೀವು ಯಾವಾಗಲೂ ಅಸ್ವಸ್ಥರಾಗಿರುವಂತೆ ಭಾವಿಸುತ್ತಿರುವಿರಿ. ಯಾರೋ ಒಬ್ಬರು, “ಸ್ವಸ್ಥತೆಯ ಭಾವನೆ ಹೊಂದಲು ಬಯಸುವಿರೋ?” ಎಂದು ನಿಮ್ಮನ್ನು ಪ್ರಶ್ನಿಸುವರು. ಇಲ್ಲವೇ ಯಾರಾದ ರೊಬ್ಬರು ನಿಮ್ಮೊಂದಿಗೆ ಒಳ್ಳೇ ಸಂಬಂಧದಲ್ಲಿ ಇರದ ಒಬ್ಬ ವ್ಯಕ್ತಿಯ ಹೆಸರನ್ನು ಹೇಳಿ, “ಆ ಮನುಷ್ಯನೊಂದಿಗೆ ಸಹಕರಿಸಿ ಕೊಂಡು ಹೋಗಲು ಬಯಸುವಿರೋ?” ಎಂದು ಕೇಳು ವರು. ನಿಮ್ಮ ವಿವಾಹ ಜೀವನವಾಗಲೀ, ಕುಟುಂಬವಾಗಲೀ ಅದು ಇರುವಂತೆ ಇರದೇ ಇದ್ದಾಗ ಯಾರಾದರೊಬ್ಬರು ಬಂದು, “ಹೆಚ್ಚು ಉತ್ತಮವಾದ ವೈವಾಹಿಕ ಜೀವನ ಇಲ್ಲವೇ ಕುಟುಂಬವನ್ನು ಅಪೇಕ್ಷಿಸುವಿರೋ?” ಎಂದು ಕೇಳಬಹುದು. ನೀವು ಅಪರಾಧೀ ಮನೋ ಭಾವನೆಯಿಂದ ಭಾರವುಳ್ಳವರಾಗಿರುವಿರಿ. “ಆ ಅಪರಾಧೀ ಮನೋಭಾವನೆಯಿಂದ ಬಿಡುಗಡೆ ಹೊಂದಲು ಬಯಸುವಿರೋ?” ಎಂಬ ಪ್ರಶ್ನೆ ಬರುವುದು.

ಇದಕ್ಕೆ ನಿಮ್ಮ ಪ್ರಾರಂಭಿಕ ಪ್ರತಿಕ್ರಿಯೆಯು, “ಎಂಥಾ ವಿಚಿತ್ರವಾದ ಪ್ರಶ್ನೆ! ನಾನು ನಿಜವಾಗಿಯೂ ಚೆನ್ನಾಗಿರಲು ಬಯಸುತ್ತೇನೆ (ಇಲ್ಲವೇ ಜನರೊಂದಿಗೆ ಸರಿಪಡಿಸಿ ಕೊಳ್ಳಲು ಅಥವಾ ಹೆಚ್ಚು ಉತ್ತಮವಾದ ಮದುವೆ ಇಲ್ಲವೇ ಮನೆಯಿರಲು, ಅಪರಾಧ ಮನೋಭಾವನೆಯಿಂದ ಬಿಡುಗಡೆ ಹೊಂದಲು ಬಯಸುತ್ತೇನೆ). ನೀನು

ಕೇಳುವಂಥದ್ದು ಎಷ್ಟು ವಿಚಿತ್ರವಾದದ್ದು'' ಎಂದಾಗಿರುವುದು. ನಮ್ಮಲ್ಲಿ ಎಲ್ಲರೂ ಆ ಸಂಗತಿಗಳನ್ನು ಬಯಸುತ್ತೇವಲ್ಲವೇ!

ನಾವು ಯೋಹಾನ 5:1-16ನ್ನು ಅಧ್ಯಯನ ಮಾಡುವಂತೆ ಈ ಪ್ರಶ್ನೆಗಳನ್ನು ನಿಮ್ಮ ಮನಸ್ಸಿನ ಹಿನ್ನೆಲೆಯಲ್ಲಿ ಇಟ್ಟುಕೊಳ್ಳಿರಿ.

ಯೇಸು ಗಲಿಲಾಯದ ತನ್ನ ಸೇವೆಯನ್ನು ಪ್ರಾರಂಭಿಸಿದ್ದನು. ಆ ಸೇವೆಯ ಒಂದು ವೈಶಿಷ್ಟ್ಯವು ರೋಗಿಯನ್ನು ಗುಣಪಡಿಸಿದ್ದು. ಯೇಸುವು ಬೋಧಿಸುತ್ತ ಜನರನ್ನು ಗುಣಪಡಿಸುತ್ತಿರುವಂತೆ ಎರಡು ಸಂಗತಿಗಳು ಸಂಭವಿಸಿದವು: (1) ಜನ ಸಮೂಹಗಳು ಬೆಳೆಯುತ್ತಾ ಬಂದವು. ಹಾಗೂ (2) ವಿರೋಧವು ಹೆಚ್ಚಾಗುತ್ತಾ ಬಂದಿತು. ಈ ಪಾಠದಲ್ಲಿ ಗುಣಪಡಿಸುವಿಕೆಯನ್ನು ಅದು ಎಬ್ಬಿಸಿದ ವಿರೋಧವನ್ನು ಅಧ್ಯಯನ ಮಾಡೋಣ. ನಾವು ಕಥೆಯೊಂದಿಗೆ ಮುಂದುವರಿಯುವಾಗ ಯೇಸುವು ಕೇಳಿದ ವಿಚಿತ್ರ ಪ್ರಶ್ನೆಯನ್ನು ಪರಿಶೋಧಿಸೋಣ: ``ನಿನಗೆ ನಿಜವಾಗಿಯೂ ಸ್ವಸ್ಥವಾಗಲು ಮನಸ್ಸುಂಟೋ?''

## ಕೊಳದ ಬಳಿ ಒಬ್ಬನನ್ನು ಯೇಸು ಗುಣಪಡಿಸಿದ್ದು

ಬೇತ್ಸಥಾ ಕೊಳದ ಬಳಿಯಲ್ಲಿಯ ಮನುಷ್ಯನನ್ನು ಗುಣಪಡಿಸಿದ್ದನ್ನು ಮೊದಲು ನೋಡೋಣ. ಅದು ನಿಜವಾಗಿಯೂ ಮೂರು ಭಾಗಗಳಲ್ಲಿಯ ಗುಣಪಡಿಸುವಿಕೆಯಾಗಿತ್ತೆಂದು ನಾನು ಸೂಚಿಸ ಬಯಸುತ್ತೇನೆ.

### ದೇಹದ ಗುಣಪಡಿಸುವಿಕೆ (ಯೋಹಾನ 5:1-6)

``ಇದಾದ ಮೇಲೆ ಯೊಹೂದ್ಯರದೊಂದು ಹಬ್ಬ ಬಂದದರಿಂದ ಯೇಸು ಯೆರೂಸಲೇಮಿಗೆ ಹೋದನು'' (1 ವ.) ಎಂದು 5 ನೆಯ ಅಧ್ಯಾಯ ಪ್ರಾರಂಭವಾಗುತ್ತದೆ. ``ಹಬ್ಬ''[1] ಎಂಬುದರ ಬದಲಾಗಿ ``ಒಂದು ಹಬ್ಬ'' ಎಂದು ಹೇಳಿದ್ದರಿಂದ ಇದು ಯೆಹೂದ್ಯರ ಚಿಕ್ಕ ಹಬ್ಬಗಳಲ್ಲಿ ಒಂದನ್ನು ಸೂಚಿಸುತ್ತದೆ. ಇಂಥವುಗಳಲ್ಲಿ ಭಾಗ ವಹಿಸುವುದು ಯೆಹೂದ್ಯರಿಗೆ ಅಗತ್ಯವಾಗಿದ್ದಿಲ್ಲ. ``ಅಗತ್ಯವಾದಾಗ ಮಾತ್ರವೇ'' ಆರಾಧನೆಗಳಿಗೆ ಇಂದು ಹೋಗುವಂತಿರದೇ, ಯೇಸು ಆರಾದನೆಗೆ ಹೋಗಲು ಬಯಸಿದನು![2]

``ಯೆರೂಸಲೇಮಿನಲ್ಲಿ ಕುರೀ, ಅಗಸೆ ಬಾಗಿಲಿನ ಹತ್ತಿರದಲ್ಲಿ ಒಂದು ಕೊಳವಿದೆ: ಇದಕ್ಕೆ ಇಬ್ರೀಯ ಮಾತಿನಲ್ಲಿ 'ಬೇತ್ಸಥಾ' ಎಂದು ಹೆಸರು. ಅಲ್ಲಿ ಐದು ಮಂಟಪಗಳಿವೆ'' (ವ. 2). ``ಬಾಗಿಲ'' (gate ಎಂಬ ಪದವು ಓರೆ ಅಕ್ಷರಗಳಲ್ಲಿದ್ದು [italics]) ಇದು ಭಾಷಾಂತರ ಕಾರಣದಿಂದ ಕೂಡಿಸಲ್ಪಟ್ಟಿರುವದೆಂದು ತೋರಿಸುತ್ತಾರೆ. ಮೂಲ ವಾಕ್ಯದಲ್ಲಿ ``ಕುರಿ ಸಂಗತಿಯಿಂದ''[3] ಎಂದಿದೆ. ಬಹುಶಃ ``ಕುರಿ ಸಂಗತಿಯು'' ಕುರಿ ಬಾಗಲಾಗಿದ್ದು ಅದರ ಮುಖಾಂತರ ಯಜ್ಞಕ್ಕೆ ಕುರಿಗಳು ಹಿಂಡಾಗಿ ಕೂಡಿಸಲ್ಪಡುತ್ತಿದ್ದವು.

ಇಲ್ಲಿ ನಮೂದಿಸಿದ ಕೊಳವು ಅಲ್ಲಿ ಇಂದೂ ಇದೆ. ``ಬೇತ್ಸಥಾ'' ಎಂಬುದರ ಅರ್ಥ ಬಹುಶಃ ``ದಯೆಯ ಮನೆ'' ಎಂದು ``ಐದು ಮಂಟಪಗಳು''[4] ಕೊಳದ ದಂಡೆಯ ಸುತ್ತಲೂ ಇದ್ದ ಸ್ಥಳದ ಮೇಲಿದ್ದವು.

ಮುಂಬರುವ ದೃಶ್ಯವು ಹೃದಯವನ್ನು ಚೂರು ಚೂರು ಮಾಡುವಂಥದ್ದಾಗಿದೆ. ``ಇವುಗಳಲ್ಲಿ (ಮಂಟಪಗಳಲ್ಲಿ) ಬಹುಮಂದಿ ರೋಗಿಗಳೂ ಕುರುಡರೂ ಕುಂಟರೂ ಮೈ ಒಣಗಿದವರೂ ಬಿದ್ದುಕೊಂಡಿರುವರು'' (ವ. 3). ಗಬ್ಬು ವಾಸನೆಯು ಬಹಳ ವಾಗಿತ್ತು. ವಾತಾವರಣವು ಕುಗ್ಗಿಸುವಂಥದ್ದಾಗಿತ್ತು. ನೋಟಗಳೂ ವಾಸನೆಗಳೂ ಶಬ್ದಗಳೂ ವಾಕರಿಕೆ ತರಿಸುವ ರೀತಿಯಲ್ಲಿ ಇದ್ದವು.

ಈ ವಿಷಯಕ್ಕೆ KJV ಈ ಮಾತುಗಳನ್ನು ಕೂಡಿಸುತ್ತದೆ:

> ... ಇವರು ನೀರು ಉಕ್ಕುವದನ್ನು ಕಾದುಕೊಂಡಿರುವರು. ಒಬ್ಬ ದೇವದೂತನು ಆಗಾಗ್ಗೆ ಕೊಳದಲ್ಲಿ ಇಳಿದು ಬಂದು ನೀರನ್ನು ಉಕ್ಕಿಸುವನು. ನೀರನ್ನು ಉಕ್ಕಿಸಿದ ಮೇಲೆ ಮೊದಲು ಒಳಗೆ ಹೋದವನು ಯಾವ ರೋಗದಲ್ಲಿ ಬಿದ್ದಿದ್ದರೂ ಸ್ವಸ್ಥನಾಗುವನು (ವಚನಗಳು 3ಬಿ, 4; KJV ಅಡಿಟಿಪ್ಪಣಿ).

ಈ ವಿವರಣೆಯು ಮೂಲವಾಕ್ಯದ ಪ್ರತಿಗಳಲ್ಲಿ ಇರುವದಿಲ್ಲ. ಆದರೆ ಒಬ್ಬ ಪುರಾತನ ಶಾಸ್ತ್ರಿಯು ಪಠ್ಯದೊಳಗೆ ಸೇರಿಸಿದ ವ್ಯಾಖ್ಯಾನವಾಗಿದೆ.[5] ಈ ಪದಗಳು ಆ ಸ್ಥಳಕ್ಕೆ ಜನರು ಬರುವಂತೆ ಮಾಡಲಿಕ್ಕಾಗಿದ್ದ ಪುರಾತನ ಮೂಢ ನಂಬಿಕೆಯನ್ನು ಹೇಳುತ್ತವೆ (ವ. 7 ಗಮನಿಸಿರಿ). ಬೇತ್ಸಥಾ ಎಂದು ಗುರುತಿಸಲ್ಪಟ್ಟ ಕೊಳಕ್ಕೆ ಭೂಮಿಯೊಳಗಿನ ನೀರಿನ ಬುಗ್ಗೆಗಳಿಂದ ನೀರು ಬರುತ್ತಿತ್ತು. ಕಾಲಕಾಲಕ್ಕೆ ನೀರಿನ ಗುರುಳೆಗಳೇಳುವುದು ಕಾಣಬರುತ್ತಿತ್ತು. ಬಹುಶಃ ಈ ನೀರಿನ ಚಲನೆಯನ್ನು ಜನರು ದೇವದೂತನಿಗೆ ಅನ್ವಯಿಸಿದರು.

"ಅಲ್ಲಿ ಮೂವತ್ತೆಂಟು ವರ್ಷದಿಂದ ರೋಗಿಯಾಗಿದ್ದ ಒಬ್ಬ ಮನುಷ್ಯನಿದ್ದನು" (ವ. 5). ಈ ಮನುಷ್ಯನು ತನ್ನ ಜೀವನದ ಎಲ್ಲಾ ಕಾಲದಲ್ಲಿ ಅಲ್ಲದಿದ್ದರೂ ಹೆಚ್ಚಾದ ಭಾಗ ರೋಗಿಯಾಗಿಯೇ ಇದ್ದನೆಂದು ಹೇಳಬಹುದು. ವ. 7ರಲ್ಲಿ ನೋಡುವಂತೆ ಅವನು ಬಲಹೀನನಾಗಿದ್ದನು. ತನ್ನಷ್ಟಕ್ಕೆ ತಾನೇ ನೀರಿನೊಳಗೆ ಇಳಿಯಲಿಕ್ಕಾಗದವನು ಆಗಿದ್ದನು. ಅಂಗ ವಿಕಲನಾಗಿದ್ದನು ಇಲ್ಲವೇ ಪಾರ್ಶ್ವವಾಯು ರೋಗಿಯಾಗಿದ್ದನು.

ಅದು ವಚನ 6ರ ದೃಶ್ಯವಾಗಿದೆ: "ಅವನು ಬಿದ್ದಿರುವದನ್ನು ಯೇಸು ಕಂಡು ಇವನು ಹೀಗಾಗಿ ಬಹು ಕಾಲವಾಗಿದೆ ಎಂದು ತಿಳಿದು - 'ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?'" ಎಂದು ಅವನನ್ನು ಕೇಳಿದರು. ರೋಗಿಗಳು ಕೂಡಿ ಬಂದಿದ್ದ ಈ ಕೊಳದ ಬಳಿಗೆ ಯೇಸು ಒಂದು ಉದ್ದೇಶಕ್ಕಾಗಿ ಬಂದಿದ್ದನು. ಪಟ್ಟಣದ ಸುತ್ತ ಸ್ಥಳಗಳನ್ನು ನೋಡಿ ಹೋಗಲು ಆತನು ಬಂದಿರಲಿಲ್ಲ. ಇಲ್ಲಿಗೆ ಬರಲು ಕನಿಕರವು ಆತನನ್ನು ನಡಿಸಿತೆಂಬುದರಲ್ಲಿ ಸಂಶಯವಿಲ್ಲ.

ಯೇಸು ಕೊಳದ ಬಳಿ ಬಂದಾಗ, ಅಲ್ಲಿ ಮೂವತ್ತೆಂಟು ವರ್ಷಗಳಿಂದ ರೋಗಿ ಯಾಗಿದ್ದವನು ಬಿದ್ದು ಕೊಂಡದ್ದನ್ನು ಕಂಡನು. ಈ ಮನುಷ್ಯನನ್ನು ಗುಣಪಡಿಸಲು ಯೇಸು ಯಾಕೆ ತೀರ್ಮಾನಿಸಿದನು? ಕೊಳದ ಸುತ್ತಲೂ ಇದ್ದವರೆಲ್ಲರನ್ನೂ ಬಿಟ್ಟು ಈ ಒಬ್ಬ ಮನುಷ್ಯನನ್ನು ಮಾತ್ರ ಗುಣಪಡಿಸಿದನು. ಈ ರೋಗಿ ವಿಷಯದಲ್ಲಿ ಸಂಶಯವಿರಲಿಲ್ಲವೋ? ಈ ಮನುಷ್ಯನ ವಿಷಯವು ನಿರಾಶಾದಾಯಕವಾಗಿದ್ದು, ಯೇಸುವು ನಿರೀಕ್ಷೆಯಿಲ್ಲದವರಿಗೆ ನಿರೀಕ್ಷೆಯೂ ಸಹಾಯವಿಲ್ಲದವರಿಗೆ ಸಹಾಯವೂ ಆಗಿದ್ದ ಕಾರಣವೋ? ಆ ಮನುಷ್ಯನಿಗೆ ಸ್ನೇಹಿತರುಗಳು ಇಲ್ಲದೇ ಇದ್ದುದ್ದೋ! (ವ. 7).[6] ಸ್ನೇಹಿತರಿಲ್ಲದವರಿಗೆ ಯೇಸುವು ಸ್ನೇಹಿತನಾಗಿದುದ್ದು ಕಾರಣವೋ?

ಕಾರಣವು ಏನೇ ಇದ್ದರೂ ಯೇಸುವು ಆ ಮನುಷ್ಯನು "ಈಗಾಗಲೇ ಬಹಳ ಸಮಯದಿಂದ" (ಮೂವತ್ತೆಂಟು ವರ್ಷಗಳಿಂದ) ಈ ಸ್ಥಿತಿಯಲ್ಲಿದ್ದಾನೆಂದು ತಿಳಿದು ಅವನ ಕಡೆಗೆ ಬಾಗಿ ನೋಡಿದರು ಮತ್ತು "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸಿದೆಯೋ?" ಎಂದು ಕೇಳಿದರು.

ಪ್ರಶ್ನೆಯನ್ನು ಸ್ವಲ್ಪ ವಿಶ್ಲೇಷಿಸೋಣ. ಅಂಥ ವಿಚಿತ್ರವಾದ ಪ್ರಶ್ನೆಯನ್ನು ಯೇಸುವು ಯಾಕೆ ಕೇಳಬೇಕಿತ್ತು?

ನಿಂತುಕೊಂಡು ಅದರ ಬಗ್ಗೆ ಯೋಚಿಸಿರಿ: ಮೂವತ್ತೆಂಟು ವರ್ಷಗಳವರೆಗೆ ಅಸ್ವಸ್ಥತೆಯಿಂದಿರುವುದು ಕಠಿಣವಾದದ್ದಾಗಿದ್ದರೂ ಇನ್ನೊಂದು ದೃಷ್ಟಿಕೋನದಿಂದ ಅವನಿಗೆ ಸುಲಭವಾಗಿತ್ತು. ಬೇರೆ ಯಾರೋ ಅವನನ್ನು ಪ್ರತಿದಿನ ಕೊಳದ ಬಳಿಗೆ ತಂದು ಬಿಡುತ್ತಿದ್ದರು. ಇಡೀ ದಿವಸ ಯಾವುದೇ ಜವಾಬ್ದಾರಿಕೆಯಿಲ್ಲದೆ ಬಿದ್ದು ಕೊಳ್ಳುತ್ತಿದ್ದನು. ಅವನು ಬಹುಶಃ ಕೆಲವು ಭಿಕ್ಷೆಕೂಡಿಸುತ್ತಿದ್ದನು. ಬೇರೆ ಯಾರೋ ತೀರ್ಮಾನ ಮಾಡುತ್ತಿದ್ದರು; ಬೇರೆ ಯಾರೋ ಎಲ್ಲಾ ಕೆಲಸ ಮಾಡುತ್ತಿದ್ದರು. ನಿರ್ವಾಹ ವಿಲ್ಲದೇ ಅವನು ತನ್ನ ಸ್ಥಿತಿಗೆ ಹೊಂದಿಕೊಂಡಿದ್ದನು. ಅವನ ಜೀವನದ ಉಳಿದ ಭಾಗವೂ ಹಾಗೆಯೇ ಇದ್ದಿರ ಬೇಕಾಗಬಹುದಿತ್ತು.

ಇನ್ನೊಂದು ಕಡೆಯಲ್ಲಿ ಅವನು ಥಕ್ಕನೇ ಗುಣಪಡಿಸಲ್ಪಟ್ಟರೆ ಹೇಗೆ? ಜೀವನೋಪಾಯದ ಭಾರ ಅವನ ಮೇಲೆ ಬೀಳುತ್ತಿತ್ತು. ಮೂವತ್ತೆಂಟು ವರ್ಷ ನಿರುದ್ಯೋಗಿಯಾಗಿ, ದುಡಿಮೆಯ ಯಾವದೇ ಕಲೆಯಿಲ್ಲದೇ ಈಗ ವ್ಯವಹಾರದಲ್ಲಿ ಪ್ರವೇಶಿಸ ಬೇಕಾಗಿತ್ತು. ಅವನಿಗೆ ಜವಾಬ್ದಾರಿಕೆಯು ಇರಬೇಕಾಗುತ್ತಿತ್ತು. ಅವನು ಕೆಲಸ ಮಾಡಲು ಸ್ಪರ್ಧಿಸ ಬೇಕಾಗುತ್ತಿತ್ತು ಹಾಗೂ ತೀರ್ಮಾನಗಳನ್ನು ಮಾಡಬೇಕಾಗಿತ್ತು. ನೀಚವಾಗಿ ಸೋತು ಹೋಗುವ ಸಾಧ್ಯತೆಯನ್ನು ಎದುರಿಸ ಬೇಕಾಗಿತ್ತು.

"ನಿನಗೆ ನಿಶ್ಚಯವಾಗಿ ಆರೋಗ್ಯಬೇಕೋ? ಅದಕ್ಕಾಗಿ ನೀನು ಸಿದ್ಧನಾಗಿರುವಿಯಾ?" ಎಂದು ಯೇಸು ಕೇಳುತ್ತಿದ್ದನು.

ಕೆಲವರಿಗೆ ರೋಗಿಯಾಗಿರುವುದು ಒಪ್ಪಿಗೆಯಾಗಿರುತ್ತದೆ. "ಅನಾರೋಗ್ಯದಲ್ಲಿ ಆನಂದಪಡುತ್ತಾರೆ" ಎಂಬ ಹಳೇ ಮಾತನ್ನು ನೀವು ಕೇಳಿಸಿಕೊಂಡಿರಬಹುದು. ಕೆಲವರು ತಮ್ಮನ್ನು ನೋಡಿಕೊಳ್ಳಲು, ಗಮನಿಸಲು ಬಯಸುತ್ತಾರೆ. ತಾವು ಮಾಡಲು ಬಯಸದೇ ಇರುವಂಥದ್ದಕ್ಕಾಗಿ ನೆಪ ಹುಡುಕುವವರಿದ್ದಾರೆ. ಕೆಲವರು ತಮ್ಮ ಅನಾರೋಗ್ಯವನ್ನು ಇತರರನ್ನು ನಿಯಂತ್ರಿಸಲು ಉಪಯೋಗಿಸುತ್ತಾರೆ.

ಯೇಸುವಿನ ಪ್ರಶ್ನೆಯು ಮೊದಲಿಗೆ ಕಂಡುಬಂದಂತೆ ವಿಚಿತ್ರವಾದದ್ದಾಗಿರುವುದಿಲ್ಲ.

## ಮನಸ್ಸಿನ ಗುಣಪಡಿಸುವಿಕೆ (ಯೋಹಾನ 5:7-13)

ಪ್ರಶ್ನೆಯ ಆಳಕ್ಕೆ ಹೋಗೋಣ. ಯೇಸು ಎಲ್ಲಾ ಜನರನ್ನು ಬಲ್ಲವನಾಗಿದ್ದನು; ಅವರೆಲ್ಲರೂ ಏನು ವಿಚಾರಿಸುತ್ತಿರುವರೆಂಬುದನ್ನೂ ಬಲ್ಲವನಾಗಿದ್ದನು (ಹೋಲಿಸು. ಯೋಹಾನ 2:25). ಆದುದರಿಂದ ಯೇಸು ಉತ್ತರವನ್ನು ಪಡೆದುಕೊಳ್ಳಲು ಪ್ರಶ್ನೆಯನ್ನು ಕೇಳಲಿಲ್ಲ. ಆ ಮನುಷ್ಯನು ತನ್ನೊಳಗೆ ತನ್ನನ್ನು ನೋಡಿಕೊಳ್ಳಲು ಕಾರಣವಾಗಲು ಆತನು ಪ್ರಶ್ನೆಯನ್ನು ಕೇಳಿದನು.[7] ಯೇಸು ಕೇವಲ ದೇಹವನ್ನು ಗುಣಪಡಿಸುವದರಲ್ಲಿ ಆಸಕ್ತನಾಗಿರಲಿಲ್ಲ; ಮನಸ್ಸನ್ನೂ ಗುಣಪಡಿಸುವದರ ಬಗ್ಗೆ ಆತನು ಆಸಕ್ತನಾಗಿದ್ದನು. ಆ ಮನುಷ್ಯನು ಆರೋಗ್ಯಕರವಾದ ಭಾವನೆಗಳನ್ನು ಬೆಳಸಿಕೊಳ್ಳ ಬೇಕೆಂದು ಬಯಸಿದನು.

ಈ ಮನುಷ್ಯನು ಯೇಸುವಿನ ಪ್ರಶ್ನೆಯನ್ನು ಒಂದು ಗದರಿಸುವಿಕೆಯಂತೆ ತೆಗೆದು ಕೊಂಡನು. "ನೀನು ಸ್ವಸ್ಥನಾಗಬಯಸಿದರೆ, ನೀವು ಯಾಕೆ ಆಗಬಾರದು? ನೀರು ಉಕ್ಕುವಾಗ ನೀನು ಮೊದಲನೆಯವನಾಗುವಂತೆ ಯಾಕೆ ಕೊಳದೊಳಗೆ ಧಾವಿಸಬಾರದು?" ಎಂಬರ್ಥದಲ್ಲಿ ಅವನು ಪ್ರಶ್ನೆಯನ್ನು ತೆಗೆದು ಕೊಂಡನು. "ಆ ರೋಗಿಯು - ಕರ್ತನೇ, ನೀರು ಉಕ್ಕುವಾಗ ನನ್ನನ್ನು ಕೊಳದೊಳಗೆ ಇಳಿಸುವವರು ಒಬ್ಬರೂ ಇಲ್ಲ; ನಾನು ಬರುವದರೊಳಗೆ ನನಗಿಂತ - ಮುಂದಾಗಿ ಮತ್ತೊಬ್ಬನು ಇಳಿಯುತ್ತಾನೆ ಅಂದನು" (ವ. 7).[8]

ಈ ಕೊಳವು ಬಹಳ ಆಳವಾಗಿತ್ತು ಮತ್ತು ಆಳವಿಲ್ಲದ ದಂಡೆಗಳು ಇರಲಿಲ್ಲ. ಪಾವಟಿಗೆಗಳು ನೀರೊಳಗೆ ಹೋಗುತ್ತವೆ. ನಡೆದಾಡಲಿಕ್ಕೆ ಆಗದ ಮನುಷ್ಯನು ಕೊಳದೊಳಗೆ ಇಳಿಯಲು ಅವನಿಗೆ ಸಹಾಯಬೇಕು. ನೀರು ಉಕ್ಕುವಾಗ "ಪ್ರತಿಯೊಬ್ಬರೂ ಹೋಗುವವರೇ," ಆದರೆ ಈ ರೋಗಿಗೆ ಅವಕಾಶವಿರಲೇ ಇಲ್ಲ.

ಈ ಮನುಷ್ಯನು ಯೇಸುವಿನ ಪ್ರಶ್ನೆಗೆ, "ಹೌದು" ಅಥವಾ "ಇಲ್ಲ" ಎಂದು ಹೇಳುವದರ ಬದಲು "ನಾನು ರೋಗಿಯಾಗಿರುವುದು ನನ್ನ ತಪ್ಪಲ್ಲ; ನೀರಿನಲ್ಲಿ ಇಳಿಸಲು ನನಗೆ ಯಾರು ಇಲ್ಲ" ಎಂದು ಹೇಳಿದನು. ನಮಗೆ ಸಮಸ್ಯೆಗಳಿರುವಾಗ ಅದು ನಮ್ಮ ತಪ್ಪಲ್ಲ ಅಲ್ಲವೇ? ಯಾರಾದರೂ ನಮ್ಮನ್ನು ಕೆಳಗಿಳಿಸಬಹುದು ಎಂದು ನಾವು ಯೋಚಿಸುತ್ತೇವಲ್ಲವೇ. ಬಹುಶಃ ಈ ರೋಗಿ ಮನುಷ್ಯನಂತೆ ನಮಗೂ ಮನಸ್ಸಿನ ಚಿಕಿತ್ಸೆ ಯಾಗ ಬೇಕಾಗಿದೆ.

ಯೇಸು ಈ ಮನುಷ್ಯನನ್ನು ಸುಲಭವಾಗಿ ಬಿಟ್ಟುಕೊಡಲಿಲ್ಲ. ಪೂರ್ಣವಾಗಿ ಗುಣಪಡಿಸಲು ಬಯಸಿದನು: ದೇಹದ ಗುಣಪಡಿಸುವಿಕೆ ಮಾಡುವದರೊಂದಿಗೆ ಮನಸ್ಸಿನ ಗುಣಪಡಿಸುವಿಕೆ ಮಾಡಿದನು. "ಯೇಸು ಅವನಿಗೆ - ಎದ್ದು ನಿನ್ನ ಹಾಸಿಗೆ ಯನ್ನು ಹೊತ್ತು ಕೊಂಡು ನಡೆ ಎಂದು ಹೇಳಿದನು" (ವ. 8). ಮೂವತ್ತೆಂಟು ವರ್ಷಗ ಳವರೆಗೆ ಅವನ ಹಾಸಿಗೆ ಅವನನ್ನು ಹೊತ್ತುಕೊಂಡು ಹೋಗುತ್ತಿತ್ತು; ಈಗ ಯೇಸು ಅವನಿಗೆ ಅವನ ಹಾಸಿಗೆ ಹೊತ್ತುಕೊಂಡು ಹೋಗು ಎಂದು ಹೇಳಿದನು.

ಒಂದು ನಿಮಿಷ ತಾಳಿರಿ, ಅದನ್ನೇ ಮಾಡಲಿಕ್ಕೆ ಆಗುವದಿಲ್ಲ ಎಂದು ಆ ಮನುಷ್ಯನು ಹೇಳಿದ್ದನು. ಅವನಿಗೆ ನಡೆಯಲು ಶಕ್ತಿಯಿದ್ದರೆ ಅವನು ನೀರಿನ ಬಳಿಗೆ ಮೊದಲು ಹೋಗುತ್ತಿದ್ದನು. ಆ ಮನುಷ್ಯನು ನಡೆಯಲು ಶಕ್ತನಾಗಿದ್ದರೆ ಅವನು ಈ ಕೊಳದ ಬಳಿಗೆ ಬರುತ್ತಲೇ ಇರಲಿಲ್ಲ. ಅಸಾಧ್ಯವಾದದ್ದನ್ನು ಮಾಡಲು ಯೇಸು ಅವನಿಗೆ ಹೇಳಿದನು. "ನಡೆದಾಡಲು ಪ್ರಯತ್ನಿಸದಷ್ಟು, ಸ್ವಸ್ಥತೆಯುಳ್ಳವನಾಗಿರಲು ಬಯಸುವಿಯೋ?" ಎಂದು ಯೇಸು ಅವನಿಗೆ ಕೇಳಿದನು.

ಯೋಸುವಿನ ಯಾವುದೋ ಒಂದು ಆ ಮನುಷ್ಯನ ಗಮನವನ್ನು ಸಳೆಯಿತು. ಯೇಸು ಯಾರಾಗಿದ್ದಾರೆಂಬುದನ್ನು ತಿಳಿದಿರುವಂಥದ್ದಲ್ಲ, ವಿಶ್ವಾಸವಿಡುವುದೂ ಅಲ್ಲ. ವಚನ 13ರಲ್ಲಿ ನೋಡುವಂತೆ, ಯೇಸುವು ಯಾರೆಂಬುದು ಅವನಿಗೆ ತಿಳಿಯದೆ ಇದ್ದುದ್ದು - ಅದನ್ನು ತಿಳಯಲು ಪ್ರಯತ್ತಿಸಬೇಕೆಂದು ಅವನು ತೀರ್ಮಾನಿಸಿಕೊಂಡನು. "ಆ ಕ್ಷಣವೇ ಆ ಮನುಷ್ಯನು ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದನು" (ವ. 9ಎ). ಯೇಸುವು ಮಾಡಿದ ಎಲ್ಲಾ ಗುಣಪಡಿಸುವಿಕೆಗಳಲ್ಲಿಯಂತೆ ಇದೂ ಸಹ ತಕ್ಷಣವೇ ಆಯಿತು, ಸಂಪೂರ್ಣವಾಗಿತ್ತು ಹಾಗೂ (ನಾವು ನೋಡುವಂತೆ) ದೃಢಪಡಿಸುವಂಥದ್ದಾಗಿತ್ತು.

ನನ್ನ ಜೀವನದಲ್ಲಿ ನನಗೆ ಹಲವಾರು ಗಾಯಗಳಾಗಿದ್ದು ನನ್ನ ದೇಹದ ಭಾಗಗಳನ್ನು ಕೆಲವು ತಿಂಗಳುಗಳ ವರೆಗೆ ಚಲಿಸಲಿಕ್ಕಾಗುತ್ತಿದ್ದಿಲ್ಲ. ಆ ಅಂಗಗಳು ಉಪಯೋಗಿಸದೇ ಇದ್ದಾಗ ಆದ ಪರಿಣಾಮಗಳನ್ನು ತಿಳಿದಿರುವೆನು: ನರಗಳ ಬಲಹೀನತೆ, ಚಲನೆ ಕಳೆದುಕೊಳ್ಳುವುದು ಇತ್ಯಾದಿ. ಮೂವತ್ತೆಂಟು ವರ್ಷಗಳ ವರೆಗೆ ನಿರುಪಯೋಗಿ ಯಾಗಿದ್ದ ಈ ಮನುಷ್ಯನ ದೇಹಕ್ಕೆ ಏನಾಗಿರಬಹುದೆಂದು ಕಲ್ಪನೆ ಮಾಡಿಕೊಳ್ಳಿರಿ. ಯೇಸು ಅವನನ್ನು ಗುಣಪಡಿಸಿದಾಗ ಅವನ ದೇಹವು ತುಂಬಿಕೊಂಡು ಪುನಃ ಸ್ಥಿರ ವಾದದ್ದಾಗಿರುವದನ್ನು ಅಲ್ಲಿದ್ದವರು ನೋಡಿರಬೇಕು.

ಆಗ ಅಲ್ಲಿ ಯೋಹಾನನು ಚಿಕ್ಕ ಟಿಪ್ಪಣಿಯನ್ನು ಸೇರಿಸಿದ್ದಾನೆ: "ಆದರೆ ಆ ದಿವಸ ಸಬ್ಬತ್ ದಿನವಾಗಿತ್ತು" (ವ. 10ಸಿ). ಯೇಸು ತನ್ನ ವೈರಿಗಳೊಂದಿಗೆ ವಿರೋಧ ಹುಟ್ಟಿಸಲು

ಸಬ್ಬತ್ - ದಿನದಂದು ಆ ಮನುಷ್ಯನನ್ನು ಗುಣಪಡಿಸಿದನೋ? ಇರಬಹುದು. ಒಂದು ಸಂದರ್ಭದಲ್ಲಿ ಆತನು ಹಾಗೆ ಮಾಡಿದನು (ಮತ್ತಾಯ 12:1-14). ಯೇಸು ಸಬ್ಬತ್ ದಿನದಂದು ಗುಣಪಡಿಸಿದ್ದು ಕೇವಲ ಏಕ ಕಾಲದಲ್ಲಿ ಸಂಭವಿಸಿದ್ದಾಗಿತ್ತೋ? ಆಗಿದ್ದಿರ ಬಹುದು. ಉದ್ದೇಶ ಪೂರ್ವಕವಾಗಿಯೋ, ಏಕ ಕಾಲದಲ್ಲಿಯೋ ಎಂಬುದು ಸಂಬಂದಿ ಸಿರದೇ, ಅದು ಸಬ್ಬತ್ ದಿನವಾಗಿತ್ತೆಂದು ನಾವು ತಿಳಿಯ ಬೇಕೆಂದು ಯೋಹಾನನು ಬಯಸಿದನು ಯಾಕಂದರೆ ಅನಂತರ ಸಂಭವಿಸಿದ್ದನ್ನು ಇದು ವಿವರಿಸುತ್ತದೆ.

ಆ ಮನುಷ್ಯನು ಎದ್ದು ನಿಂತು ನಡೆದಾಡಿದಾಗ ಕೊಳದ ಸುತ್ತಲೂ ಆದ ಆಶ್ಚರ್ಯದ ಬಗ್ಗೆ ಯೋಚಿಸಿರಿ. ಅಲ್ಲಿದ್ದ ಕೆಲವರಿಗೆ ಸಂತೋಷವಾಗಲಿಲ್ಲ: ಫರಿಸಾಯರು ಮತ್ತು ಇತರ ಧಾರ್ಮಿಕ ನಾಯಕರು ಸಾಂಪ್ರದಾಯವನ್ನು ಕಾಪಾಡುವವರು. ಅದ್ಭುತವಾದದ್ದರ ಬಗ್ಗೆ ಅವರು ಪ್ರಶ್ನಿಸಲಿಲ್ಲ. ಆದರೆ ಅವರು ಮಾನವ ನಿರ್ಮಿತ ನಿಯಮಗಳಲ್ಲಿ ಒಂದರ ಬಗ್ಗೆ ಆಸಕ್ತರಾಗಿದ್ದರು. "ಹೀಗಿರುವದರಿಂದ ಯೆಹೂದ್ಯರು ಸ್ವಸ್ಥನಾದವನಿಗೆ ಈ ಹೊತ್ತು ಸಬ್ಬತ್ ದಿನವಾಗಿದೆ; ನೀನು ಹಾಸಿಗೆಯನ್ನು ಹೊರುವುದು ಸರಿಯಲ್ಲವೆಂದು ಹೇಳಿದರು" (ವ. 10). ಅದು ದುಃಖಕರವಾದದ್ದಲ್ಲವೇ? ಗುಣಪಡಿಸಿವಿಕೆಯ ಬಗ್ಗೆ ಅವರು ಏನೂ ಹೇಳಲಿಲ್ಲ. ಒಬ್ಬ ಮನುಷ್ಯನು ಸ್ವಸ್ಥನಾದದ್ದಕ್ಕೆ ಅವರಿಗೆ ಸಂತೋಷವಿರಲಿಲ್ಲ. "ನಮ್ಮ ಸಂಪ್ರದಾಯಗಳಲ್ಲಿ ಒಂದನ್ನು ಮುರಿದಿರುವಿ!" ಎಂದು ಅವರು ಹೇಳಿದರು.

"ಸಬ್ಬತ್" ಎಂಬ ಪದದ ಮೂಲ ಅರ್ಥ "ವಿಶ್ರಾಂತಿ." ದೇವರು ಜಗತ್ತನ್ನು ಸೃಷ್ಟಿಸಿದಾಗ ಏಳನೆಯ ದಿನದಲ್ಲಿ ಆತನು ವಿಶ್ರಾಂತಿ ಪಡೆದನು (ಆದಿ. 2:1-3). ಅನಂತರದಲ್ಲಿ ಏಳನೆಯ ದಿನದ ವಿಶ್ರಾಂತಿಯು ಸಬ್ಬತ್ ಎಂದು ಕರೆಯಲ್ಪಟ್ಟು ದಶಾಜ್ಞೆಗಳ ಭಾಗವಾಯಿತ್ತು (ವಿಮೋಚನಕಾಂಡ 20:8-11). ಸಬ್ಬತ್ ಯೆಹೂದ್ಯರಿ ಗಾಗೆ ವಿಶೇಷ ಸಮಯವಾಗಿತ್ತು. ಅದು ವಿಶ್ರಾಂತಿಯ ದಿನ, ಆರಾಧನೆಯ ದಿನ, ದೇವರ ಧ್ಯಾನ ಮಾಡುವ ದಿನ, ಆನಂದಪಡುವ ಸಮಯವಾಗಿತ್ತು. ಸಬ್ಬತ್ ಆಚರಿಸಲ್ಪಡು ವದನ್ನು ನಿಶ್ಚಿತಪಡಿಸಿಕೊಳ್ಳಲು ಅದನ್ನು ಮೀರುವವರಿಗೆ ದೇವರು ಕಠಿಣವಾದ ದಂಡನೆಯನ್ನು ವಿಧಿಸಿದನು. ಸಬ್ಬತ್ ದಿನದಲ್ಲಿ ಕಟ್ಟಿಗೆ ಕೂಡಿಸಿದ ಒಬ್ಬ ಮನುಷ್ಯನು ಕಲ್ಲೆಸೆದು ಕೊಲ್ಲಲ್ಪಟ್ಟನು ಎಂದು ಅರಣ್ಯಕಾಂಡ 15ರಲ್ಲಿ ವಿವರಿಸಲ್ಪಟ್ಟಿದೆ. ನೆಹಮೀ ಯನ ಗ್ರಂಥದಲ್ಲಿ ಸಬ್ಬತ್ ದಿನದಂದು ವ್ಯಾಪಾರ ಮಾಡಿದ್ದಕ್ಕಾಗಿ - ಕಠಿಣವಾದ ಶಿಕ್ಷೆ ಕೊಡಲ್ಪಟ್ಟಿದೆ.

ದೇವರ ನಿಯಮಗಳು ಸಾಕಷ್ಟು ಕಟ್ಟುನಿಟ್ಟಿನವುಗಳಾಗಿವೆ. ಆದರೆ ಮನುಷ್ಯನು ಅಷ್ಟಕ್ಕೇ ಬಿಡಲು ಮನಸ್ಸುಳ್ಳವನಾಗಿರಲಿಲ್ಲ. ನಿಯಮಗಳ ಇಪ್ಪತ್ಮೂರು ಅಧ್ಯಾಯಗಳನ್ನು ಕೂಡಿಸುವದರಿಂದ ಸಬ್ಬತ್ ನಿಯಮವನ್ನು ಫರಿಸಾಯರು ವಿಸ್ತರಿಸಿದರು! ಇದರಲ್ಲಿ ಅನೇಕ ನಿಯಮಗಳು ಹಾಸ್ಯಾಸ್ಪದವಾದವುಗಳಾಗಿವೆ. ಉದಾಹರಣೆಯಾಗಿ ಒಬ್ಬನು ತನ್ನ ಬೆರಳುಗಳ ಉಗುರುಗಳನ್ನು ಕಡಿಯಬಾರದು ಯಾಕಂದರೆ ಅದು ಸಬ್ಬತ್ ದಿನದಲ್ಲಿ ಕೆಲಸಮಾಡಿದಂತೆ ಆಗುವುದು. ಅನೇಕ ಮಾನವ ನಿರ್ಮಿತ ನಿಯಮಗಳು ಭಾರ ಹೊರುವದರ ಬಗ್ಗೆ ಇದ್ದವು. ಸಬ್ಬತ್ ದಿನದಲ್ಲಿ ಕೃತಕ ಹಲ್ಲುಗಳನ್ನು ಇಲ್ಲವೇ ಕೃತಕ ಕಾಲನ್ನು ಅವು ಭಾರವಾಗಿರುವದರಿಂದ ಅವುಗಳನ್ನು ಧರಿಸುವದರ ಬಗ್ಗೆ ವಾದಿಸಿದರು. ಒಬ್ಬ ಮಹಿಳೆ ಒಂದು ನಿಲುವಂಗಿಯನ್ನು ರಿಪೇರಿ ಮಾಡಿ, ಅದರಲ್ಲಿ ಸೂಜಿಯನ್ನು ಹಾಗೆಯೇ ಬಿಟ್ಟಿದ್ದರೆ ಮತ್ತು ಆಕೆಯ ಗಂಡನು ಸಬ್ಬತ್ ದಿನದಂದು ಆ ನಿಲುವಂಗಿಯನ್ನು ಧರಿಸಿದರೆ ಅವನು ಸೂಜಿಯನ್ನು ಹೊರುವದರಿಂದ ಪಾಪ ಮಾಡಿದವನಾಗುತ್ತಾನೆ. (ಈ ಪ್ರತಿಬಂಧಗಳು ದೇವರ ಪ್ರತಿಬಂಧಗಳಲ್ಲ ಎಂಬುದನ್ನು ಗಮನಿಸಿರಿ. ಆದರೆ ಇವು ಮಾನವನಿಂದ ಒತ್ತಾಯವಾಗಿ ಹೇಲಲ್ಪಟ್ಟವುಗಳು[9].)

ಇವುಗಳಲ್ಲಿ ಒಂದು ನಿಯಮವು ಯೋಹಾನ 5ರಲ್ಲಿಯ ಪರಿಸ್ಥಿತಿಗೆ ಸಂಬಂಧಿಸಿತ್ತು. "ಒಬ್ಬ ಮನುಷ್ಯನು ಮೇಲಿದ್ದ ಹಾಸಿಗೆಯನ್ನು ಹೊತ್ತು ಕೊಂಡು ಹೋಗಬಹುದು." ಯಾಕಂದರೆ ಹಾಸಿಗೆಯು ಪ್ರಾಮುಖ್ಯವಾದದ್ದಲ್ಲ. ಆದರೆ ಅದರ ಮೇಲೆ ಮನುಷ್ಯನಿಲ್ಲದ ಹಾಸಿಗೆಯನ್ನು ಹೊತ್ತುಕೊಂಡು ಹೋಗಬಾರದು. ಹೀಗಿದ್ದರೂ ಯೇಸುವು ಇದನ್ನೇ ಮಾಡಬೇಕೆಂದು ಹೇಳಿದನು: "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದನು.

"ಈ ಹೊತ್ತು ಸಬ್ಬತ್ ದಿನವಾಗಿದೆ: ನೀನು ಹಾಸಿಗೆಯನ್ನು ಹೊರುವದು ಸರಿಯಲ್ಲ" (ವ. 10) ಎಂದು ಫರಿಸಾಯರು ಹೇಳಿದಾಗ, "ಇದು ನನ್ನ ತಪ್ಪಲ್ಲ" ಎನ್ನುವ ರೀತಿಯಲ್ಲಿ ಅವನು ಹೇಳಿದನು ("ನಾನು ನಡೆಯದೇ ಇರುವಂಥದ್ದು ನನ್ನ ತಪ್ಪಲ್ಲ" ಎಂದು ಅವನು ಯೇಸುವಿಗೆ ಹೇಳಿದ್ದನು. ಈಗ ಅವನು ಫರಿಸಾಯರಿಗೆ "ನಾನು ನಡೆಯುತ್ತಿರುವುದು ನನ್ನ ತಪ್ಪಲ್ಲ" ಎಂದು ಹೇಳಿದನು). "ಅದಕ್ಕೆ ಅವನು - ನನ್ನನ್ನು ಸ್ವಸ್ಥಮಾಡಿದವನೇ ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ನನಗೆ ಹೇಳಿದನು ಅಂದನು" (ವ. 11). "ಈ ಮನುಷ್ಯನಿಗೆ ನನ್ನನು ಗುಣಪಡಿಸಲು ಅಧಿಕಾರವಿದ್ದರೆ, ನಿಶ್ಚಯವಾಗಿಯೂ ಈತನಿಗೆ ನನ್ನ ಹಾಸಿಗೆಯನ್ನು ಹೊತ್ತು ಕೊಂಡು ಹೋಗೆಂದು ಹೇಳಲು ಅಧಿಕಾರವಿದೆ" ಎಂದು ಇನ್ನೊಂದು ರೀತಿಯಲ್ಲಿ ಹೇಳಬಹುದು.

"ಹೊತ್ತುಕೊಂಡು ನಡೆ ಎಂದು ನಿನಗೆ ಹೇಳಿದ ಮನುಷ್ಯನು ಯಾರೆಂದು ಅವನನ್ನು ಕೇಳಿದರು. ಆದರೆ ಅವನಾರೆಂಬುದು ಸ್ವಸ್ಥವಾದವನಿಗೆ ತಿಳಿದಿರಲಿಲ್ಲ. ಆ ಸ್ಥಳದಲ್ಲಿ ಜನರ ಗುಂಪು ಇದ್ದದರಿಂದ ಯೇಸು ಸರಕೊಂಡು ಹೋಗಿದ್ದನು" (12, 13 ವಚನಗಳು). ಮೊದಲು ಹೇಳಿದ ಸಂಗತಿಯನ್ನು ಗಮನಿಸಿರಿ: ಯೇಸು ಯಾರೆಂಬುದು ಅವನಿಗೆ ತಿಳಿದಿರಲಿಲ್ಲ. ಯೇಸು ಅವನನ್ನು ಗುಣಪಡಿಸಿದ್ದರು. ಆಮೇಲೆ ಆತನು ಜನರ ಗುಂಪಿನಲ್ಲಿ ಮರೆಯಾಗಿ ಹೋಗಿದ್ದರು.

**ಆತ್ಮದ ಗುಣಪಡಿಸುವಿಕೆ (ಯೋಹಾನ 5:14-16)**

ಯೇಸು ಈ ಮನುಷ್ಯನೊಂದಿಗೆ ಇನ್ನು ಮುಗಿಸಿರಲಿಲ್ಲ. "ಇದಾದ ಮೇಲೆ ಯೇಸು ಅವನನ್ನು ದೇವಾಲಯದಲ್ಲಿ ಕಂಡುಕೊಂಡು - ನಿನಗೆ ಸ್ವಸ್ಥವಾಯಿತಲ್ಲಾ;[10] ಇನ್ನು ಮೇಲೆ ಪಾಪಮಾಡಬೇಡ: ನಿನಗೆ ಹೆಚ್ಚಿನ ಕೇಡು ಬಂದೀತು ಅಂದನು" (ವ. 14). ಯೇಸುವು ಹೇಳಿದ "ಹೆಚ್ಚಿನ ಕೇಡು" ಇನ್ನೂ ಕೆಟ್ಟದ್ದಾದ ವ್ಯಾಧಿಯ ಬಗೆಗೆ ಇರಬಹುದು. ಆದರೆ ಯೇಸು ಬಹುಶಃ ನರಕದ ಬಗ್ಗೆ ಸೂಚಿಸಿರಬಹುದು. ಜೀವನವು ಎಷ್ಟೇ ಕೆಟ್ಟದ್ದು ಆಗಿದ್ದರೂ ಅದು ನಿತ್ಯನರಕದ ಬೆಂಕಿಯೊಂದಿಗೆ ಹೋಲಿಸುವಾಗ ಏನೂ ಅಲ್ಲದ್ದಾಗುವುದು.

ಮನುಷ್ಯನ ಅಸ್ವಸ್ಥತೆಯು ಅವನ ಜೀವನದಲ್ಲಿಯ ಪಾಪದ ಪರಿಣಾಮವಾಗಿತ್ತೆಂದು ಯೇಸುವಿನ ಮಾತುಗಳು ತೋರಿಸಿದವೆಂದು ಅನೇಕ ವ್ಯಾಖ್ಯಾನಕಾರರು ಯೋಚಿಸುತ್ತಾರೆ. ಇದೂ ಸಾಧ್ಯವಿರಬಹುದು. ಯೋಹಾನ 9ರಲ್ಲಿ ಎಲ್ಲಾ ರೋಗವು ಪಾಪದ ಪರಿಣಾಮವಲ್ಲ ಎಂದು ಯೇಸು ಒತ್ತಿ ಹೇಳಿದ್ದಾನೆ. ಹೀಗಿದ್ದರೂ ಕೆಲವು ರೋಗಗಳು ಪಾಪದ ಪರಿಣಾಮಗಳಾಗಿರಬಹುದು - ಇಂದು ಬಹಳವಾಗಿ ಹಬ್ಬಿರುವ HIV ವೈರಸ್ ಹಾಗೂ AIDS ರೋಗಗಳು ಉದಾಹರಣೆಯಾಗಿವೆ. HIV ವೈರಸ್ ಹೊಂದಿದ ಪ್ರತಿಯೊಬ್ಬರೂ ಪಾಪಮಾಡಿರುವುದಿಲ್ಲ ಆದರೆ ಅವರಲ್ಲಿ ಅನೇಕರು ಲೈಂಗಿಕ ಪಾಪದಿಂದ ಇದನ್ನು ಹೊಂದಿ ಕೊಂಡಿದ್ದಾರೆ.

ಮನುಷ್ಯನ ಜೀವನದಲ್ಲಿಯ ಪಾಪಕ್ಕೂ ಅವನ ದೈಹಿಕ ಪರಿಸ್ಥಿತಿಗೂ ಮಧ್ಯದಲ್ಲಿ

ನೇರವಾದ ಸಂಬಂಧ ಇಲ್ಲದೇ ಇರುವ ಸಾಧ್ಯತೆಯೂ ಇದೆ. ಯೇಸು ಸುಮ್ಮನೇ ಮನುಷ್ಯನ ಅತಿ ದೊಡ್ಡ ಸಮಸ್ಯೆಯನ್ನು ಪರಿಹರಿಸಲು ಬಯಸಿರಬೇಕು. ಯೇಸುವಿನ ಕಾರ್ಯಸೂಚಿ ಪಟ್ಟಿಯಲ್ಲಿ ಮೊದಲನೆಯ ಸಂಗತಿಯು ಯಾವಾಗಲೂ ದೇಹವನ್ನು ಗುಣಪಡಿಸುವಂಥದ್ದಲ್ಲ ಆದರೆ ಆತ್ಮವನ್ನು ಗುಣಪಡಿಸುವುದು ಆಗಿತ್ತು.[11] (ನನ್ನ ಒಬ್ಬ ಸ್ನೇಹಿತನು[12] ಯೇಸುವು ಹೀಗೆ ಹೇಳಿದ್ದಾನೆಂದು ಸೂಚಿಸಿದನು: "ಇನ್ನು ಮೇಲೆ ಪಾಪಮಾಡಬೇಡ." ಯಾಕಂದರೆ ಮೂವತ್ತೆಂಟು ವರ್ಷಗಳ ವರೆಗೆ ಯಾವ ಕೆಟ್ಟ ಕಾರ್ಯ ಮಾಡಿರಲಿಲ್ಲ. ಅವನು ಅಸ್ವಸ್ಥನಾದಾಗ ಮಾಡದಿದ್ದ ಹಾಗೂ ಮಾಡಬಾರದ ಸಂಗತಿಗಳನ್ನು ಮಾಡಲು ಹೋಗಬಹುದಿತ್ತು.)

"ಇನ್ನು ಮೇಲೆ ಪಾಪ ಮಾಡಬೇಡ" ಎಂದು ಯೇಸು ಹೇಳಿದ ಮಾತುಗಳ ಅರ್ಥ ಏನೇ ಇದ್ದರೂ ಒಂದು ಸತ್ಯ ಸ್ಪಷ್ಟವಾಗಿದೆ: ಯೇಸುವು ಆ ಮನುಷ್ಯನ ಆತ್ಮಿಕ ಪರಿಸ್ಥಿತಿಯ ಬಗ್ಗೆ ಬಹಳವಾಗಿ ಆಸಕ್ತನಾಗಿದ್ದನು. ಆ ಮನುಷ್ಯನ ದೇಹವು ಗುಣಪಡಿಸಲ್ಪಟ್ಟು, ದೇವರೊಂದಿಗಿನ ಅವನ ಸಂಬಂಧವು ತಪ್ಪಾಗಿ ಉಳಿದು ಕೊಂಡಿದ್ದರೆ, ದೈಹಿಕ ವಾಸಿಯಾಗುವಿಕೆಗೆ ಬೆಲೆಯೇ ಇರುತ್ತಿರಲಿಲ್ಲ. ಯೇಸುವು ಆ ಮನುಷ್ಯನ ದೇಹದ ಬಗ್ಗೆ, ಆ ಮನುಷ್ಯನ ಮನಸ್ಸಿನ ಬಗ್ಗೆ ಎಲ್ಲಕ್ಕಿಂತಲೂ ಹೆಚ್ಚಾಗಿ ಅವನ ಆತ್ಮದ ಬಗ್ಗೆ ಆಸಕ್ತನಾಗಿದ್ದನು.

ಕಥೆಯನ್ನು ಮುಕ್ತಾಯಗೊಳಿಸಲು ವ. 15 ಪ್ರಾರಂಭಿಸುತ್ತದೆ. "ಆ ಮನುಷ್ಯನು ಅಲ್ಲಿಂದ ಹೋಗಿ - ನನ್ನನ್ನು ಸ್ವಸ್ಥಮಾಡಿದವನು ಯೇಸುವೇ ಎಂದು ಯೆಹೂದ್ಯರಿಗೆ ತಿಳಿಸಿದನು" ಯೆಹೂದ್ಯರು ಮೊದಲು ಆ ಮನುಷ್ಯನಿಗೆ, "ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ನಿನಗೆ ಹೇಳಿದ ಮನುಷ್ಯನು ಯಾರು?" ಎಂದು ಕೇಳಿದ ಪ್ರಶ್ನೆಗೆ (ವ. 12), ಅವನು ಉತ್ತರವಾಗಿ ಯೇಸುವಿನ ಬಗ್ಗೆ ಹೇಳಿದನು. ಹೀಗಿದ್ದರೂ ಅವನು ಉತ್ತರ ಕೊಡಲು ಪ್ರಯತ್ನಿಸಿದವನೆಂದು ನಾನು ಯೋಚಿಸುವದಿಲ್ಲ. ಅವನ ಸಾಕ್ಷಿ ಏನೆಂಬುದನ್ನು ಗಮನಿಸಿರಿ. ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ಹೇಳಿದವನು ಯೇಸು ಎಂದು ಹೇಳಲಿಲ್ಲ. "ನನ್ನನು ಸ್ವಸ್ಥಮಾಡಿದವನು ಯೇಸು" ಎಂದು ಅವನು ಹೇಳಿದನು. ಈಗ ಅವನು ಯೇಸುವಿನಲ್ಲಿ ನಂಬಿಕೆಯಿಟ್ಟನು. ಹೀಗೆ ಕರ್ತನ ಶಕ್ತಿ ಹಾಗೂ ವ್ಯಕ್ತಿತ್ವಕ್ಕೆ ಸಾಕ್ಷಿ ಕೊಟ್ಟನು. ಅವನ ದೇಹ ಮತ್ತು ಮನಸ್ಸಿನೊಂದಿಗೆ ಅವನ ಆತ್ಮವು ಸ್ವಸ್ಥಪಡಿಸಲ್ಪಟ್ಟಿತ್ತು.

ಯೋಹಾನನು ಸಂಪಾದಕೀಯ ಟಿಪ್ಪಣಿಯೊಂದಿಗೆ ಈ ಕಥೆಯನ್ನು ಮುಗಿಸುತ್ತಾನೆ: "ಆದಕಾರಣ ಯೆಹೂದ್ಯರು - ಯೇಸು ಸಬ್ಬತ್ ದಿನದಲ್ಲಿ ಇಂಥ ಕೆಲಸಗಳನ್ನು ಮಾಡುತ್ತಾನಲ್ಲಾ ಎಂದು ಆತನನ್ನು ಹಿಂಸಿಸುವವರಾದರು" (ವ. 16).

## ಯೇಸು ನಮ್ಮೆಲ್ಲರನ್ನು ಗುಣಪಡಿಸ ಬಲ್ಲನು

ಅದು ಕೊಳದ ಬಳಿಯ ಮನುಷ್ಯನನ್ನು ಗುಣಪಡಿಸಿದ್ದರ ಕಥೆಯ ಅಂತ್ಯವಾಗಿತ್ತು, ಆದರೆ ನಾವು ನಮ್ಮ ಪಠ್ಯವನ್ನು ಮುಗಿಸಿರುವದಿಲ್ಲ. ಆ ಸಂದರ್ಭದಲ್ಲಿ ಅಲ್ಲಿದ್ದ ಇನ್ನೊಂದು ಗುಂಪಿನ ಬಗ್ಗೆ ನಾವು ಯೋಚಿಸಬೇಕೆಂದು ಬಯಸುತ್ತೇನೆ. ಆ ಮೇಲೆ ನಮ್ಮಲ್ಲಿ ಒಬ್ಬೊಬ್ಬರಿಗೆ ಅನ್ವಯಿಸಲು ಬಯಸುತ್ತೇನೆ.

### ಫರಿಸಾಯರಿಗಾಗಿ ಪ್ರಶ್ನೆ

"ನಿಮಗೆ ನಿಜವಾಗಿಯು ಸ್ವಸ್ಥರಾಗಲಿಕ್ಕೆ ಮನಸ್ಸುಂಟೋ?" ಎಂದು ಯೆಹೂದಿ ನಾಯಕರಿಗೆ ಯೇಸುವು ಕೇಳಿರಬಹುದೆಂದು ಎಂದಾದರೂ ಯೋಚಿಸಿರುವಿರೋ?

ಯೇಸುವಿನ ಅಪೊಸ್ತಲರ ನಂತರ ಬೇರೆಯವರಿಗಿಂತ ಹೆಚ್ಚಾಗಿ ಯೇಸುವಿನ ಅದ್ಭುತಗಳನ್ನು ನೋಡಿದವರು, ಆತನ ಬೋಧನೆಯನ್ನು ಕೇಳಿದವರು ಯಾರು? ಆತನನ್ನು ಟೀಕಿಸುತ್ತಿದ್ದ ಶಾಸ್ತ್ರಿಗಳೂ ಫರಿಸಾಯರೂ. ಅವರು ಆತನನ್ನು ಮಾತಿನಲ್ಲಿ ಹಿಡಿಯಲು, ಆತನ ಮೇಲೆ ದೂರು ಹೇಳಲು ಏನನ್ನಾದರೂ ಕಂಡುಕೊಳ್ಳಲು ಎಲ್ಲಾ ಕಡೆಗಳಲ್ಲಿ ಆತನನ್ನು ಬೆನ್ನಟ್ಟಿದರು. ನಾವು ಅಧ್ಯಯನ ಮಾಡುತ್ತಿರುವ ಕಥೆಗಿಂತ ಮೊದಲು ಅವರು ಗೋದಿ ಹೊಲದೊಳಗೆ ಅಡಗಿಕೊಂಡಿದ್ದರು. ಯೇಸುವಿನ ಶಿಷ್ಯರು ಸಬ್ಬತ್ ದಿನದಂದು ತೆನೆಗಳನ್ನು ಮುರಿದು ತಿಂದ ಬಗ್ಗೆ ದೂರು ಹೇಳಿದರು (ಮತ್ತಾಯ 12:1, 2).

ಈ ಯೆಹೂದ್ಯರಿಗೆ ಯೇಸುವಿನಿಂದ ಆತ್ಮಿಕವಾಗಿ ಗುಣಹೊಂದಲಿಕ್ಕೆ ಪ್ರತಿಯೊಂದು ಅವಕಾಶವಿತ್ತು. ವರ್ಷಗಳಿಂದ ಯೆಹೂದಿ ಜನಾಂಗವು ಮೆಸ್ಸೀಯನಿಗಾಗಿ ಮುನ್ನೋಡುತ್ತಿತ್ತು. ಮೆಸ್ಸೀಯನನ್ನು ಕುರಿತಾದ ಪ್ರವಾದನೆಗಳನ್ನೂ ಮೆಸ್ಸೀಯನು ಹೇಗಿರುವನು ಮತ್ತು ಅವನು ಏನು ಮಾಡುವನು ಎಂಬುದನ್ನು ಅವರು ತಿಳಿದಿದ್ದರು. ಯೇಸು ಪ್ರತಿಯೊಂದು ಪ್ರವಾದನೆಯನ್ನು ನೆರವೇರಿಸಿದರು.

"ಮೆಸ್ಸೀಯನು ಬರಬೇಕೆಂದು ನಾವು ಬಯಸುತ್ತೇವೆ! ಅವರು ನಮ್ಮ ಜನರನ್ನು ಗುಣಪಡಿಸಬೇಕೆಂದು ಬಯಸುತ್ತೇವೆ!" ಎಂದು ಹೇಳಿದರು. "ನೀವು ನಿಜವಾಗಿಯೂ ಗುಣಹೊಂದಲು ಬಯಸುವಿರೋ?" ಎಂದು ಯೇಸು ಕೇಳಿದ್ದಿರಬಹುದು.

ಯೋಹಾನ 5ರ ಕೊನೆಯ ಭಾಗದಲ್ಲಿ ಯೆಹೂದಿ ನಾಯಕರಿಗೆ ಸಂಬಂಧಿಸಿದ ಯೇಸುವಿನ ಮಹಾ ಬೋಧನೆಗಳಲ್ಲಿ ಒಂದು ನಮಗಿರುವುದು (19-47 ವಚನಗಳು). ಪ್ರಸಂಗದಲ್ಲಿ ಯೇಸು ಮೂರು ಮಹಾ ಪ್ರತಿಪಾದನೆಗಳನ್ನು ಮಾಡಿದರು: (1) ಆತನು ದೇವರೊಂದಿಗೆ ಸರಿಸಮಾನನು, (2) ಆತನು ದೇವರ ಕಾರ್ಯಗಳನ್ನು ಮಾಡಿದನು. ಹಾಗೂ (3) ಆತನಿಗೆ ದೇವರ ಅಧಿಕಾರವಿತ್ತು. ಆತನು ಆತ್ಮಿಕ ಜೀವಕೊಟ್ಟನು (ವ. 21). ಆತನು ಸತ್ತವರನ್ನು ಎಬ್ಬಿಸುವನು (28, 29 ವಚನಗಳು). ಆತನು ಎಲ್ಲಾ ಜನರಿಗೆ ನ್ಯಾಯ ತೀರಿಸುವನು (22, 23 ವಚನಗಳು). ಸಹಸ್ರಾರು ಸಂಖ್ಯೆಯಲ್ಲಿ ರಕ್ಷಿಸಲು ಉಪದೇಶದಲ್ಲಿ ಸಾಕಷ್ಟು ಸತ್ಯ ಹಾಗೂ ರುಜುವಾತು ಇತ್ತು.

"ನಿಮ್ಮ ಎಲ್ಲಾ ಆತ್ಮಿಕ ರೋಗಗಳ ಬಾಧೆಗಳಿಂದ ಗುಣ ಹೊಂದಲು ಬಯಸುವದಿಲ್ಲವೋ?" ಎಂದು ಯೇಸು ಅವರನ್ನು ಕೇಳಿದ್ದಿರಬಹುದು. ಹಾಗೆ ಆತನು ಕೇಳಿದ್ದರೆ ಉತ್ತರವು ಹೀಗಿರಬಹುದಿತ್ತು: "ಹೌದು, ನಮ್ಮ ಸಂಪ್ರದಾಯಗಳನ್ನು, ನಮ್ಮ ಪೂರ್ವಕಲ್ಪಿತ ಅಭಿಪ್ರಾಯಗಳನ್ನು ಬಿಡಬೇಕೆಂಬ ಅರ್ಥ ಅವರಲ್ಲಿ ಇರದಿದ್ದರೆ ಆಗಬಹುದು." ಇದನ್ನೇ. "ನಮಗೆ ಅದು ಬೇಕು - ನಾವು ಅದಕ್ಕೆ ಕ್ರಮ ಕೊಡುವ ಅವಶ್ಯಕತೆ - ಯಿಲ್ಲದವರೆಗೆ!" ಎಂದು ಬೇರೆ ಮಾತಿನಲ್ಲಿ ಹೇಳಬಹುದು.

**ನಮಗಾಗಿ ಪ್ರಶ್ನೆ**

ನಮಗೆ ನೇರವಾಗಿ ಕೇಳಲ್ಪಡುವ ಪ್ರಶ್ನೆಗೆ ನಾವು ಸಿದ್ಧರಾಗಿದ್ದೇವೆಯೋ? ನಾನು ನಿಮ್ಮನ್ನು ಎಚ್ಚರಿಸುತ್ತೇನೆ: ಅದು ನಿಮ್ಮನ್ನು ನೋಯಿಸಬಹುದು! ಅದು ನಿಮ್ಮನ್ನು ಚುಚ್ಚಬಹುದು, ಅದು ಅನುಕೂಲವಿಲ್ಲದ್ದಾಗಿರಬಹುದು. (ತಂದೆಯವರು ಹೇಳುತ್ತಿದ್ದಂತೆ, ಅದು ನಿಮಗೆ ತೊಂದರೆ ಕೊಡುವದಕ್ಕಿಂತ - ನನಗೆ ಹೆಚ್ಚಾಗಿ ತೊಂದರೆ ಕೊಡುವದೆಂದು ನಿಮಗೆ ಭರವಸೆ ಕೊಡುತ್ತೇನೆ!)

ನಿಮ್ಮ ದೇಹದ ತೂಕ ಮಿತಿಗಿಂತ ಹೆಚ್ಚಾಗಿದೆಯೇ? ನೀವು ನಿಜವಾಗಿಯೂ ತೂಕ ಕಳೆದುಕೊಳ್ಳಲು ಬಯಸುವಿರೋ? ಮಿತವಾದ ಆಹಾರ ಮತ್ತು ವ್ಯಾಯಾಮ ಮಾಡುವ ಕ್ರಯ ಕೊಡಲು ಸಿದ್ಧರಾಗಿರುವಿರೋ ಎಂದು ಬೇರೆ ಮಾತಿನಲ್ಲಿ ಕೇಳಬಹುದು. (ನಮ್ಮ

ಸುತ್ತಲೂ ಇರುವವರು ತಮಗೆ ಬೇಕಾದ ಎಲ್ಲವನ್ನೂ ತಿನ್ನುತ್ತಿರುವಾಗ ಅವುಗಳನ್ನು ನಾವು ತಿನ್ನದೇ ಇರುವಂಥದ್ದು ಹೇಗೆ ನೋವು ಕೊಡುತ್ತದಲ್ಲವೇ!)

ಇಂದಿನ ಅನೇಕ ಚಿಕ್ಕಟ್ಟುಗಳಲ್ಲಿ ನೀವು ನಿಮ್ಮನ್ನು ಕಂಡು ಕೊಳ್ಳುವಿರೋ: ನಿಮಗೆ ಮುಖ್ಯವಾದ ದೊಡ್ಡ ದೈಹಿಕವಾದ ಅಸ್ವಸ್ಥತೆಯಿರುವದಿಲ್ಲ, ಆದರೆ ನೀವು ಕೆಟ್ಟದ್ದಾಗಿ ಭಾವಿಸಿ ಕೊಳ್ಳುತ್ತಿರುವಿರೋ? ಚೆನ್ನಾಗಿರುವ ಭಾವನೆ ಹೊಂದಲು ಬಯಸುವಿರೋ? ಯೋಗ್ಯ ಆಹಾರ ತಿನ್ನುವದರೊಂದಿಗೆ ಹಾಗೂ ಸಾಕಷ್ಟು ವ್ಯಾಯಾಮ ಮಾಡುವದರೊಂದಿಗೆ ನಿಮ್ಮ ದೇಹ, ಮನಸ್ಸು, ಮತ್ತು ಆತ್ಮಕ್ಕೆ ವಿಶ್ರಾಂತಿ ಕೊಡುವಂತೆ ನಿಮ್ಮ ಜೀವಿತವನ್ನು ಪುನಃ ಯೋಚಿಸಲು ಹಾಗೂ ನಿಮ್ಮ ಪ್ರಾಧಾನ್ಯತೆಗಳನ್ನು ನೇಮಿಸಿಕೊಳ್ಳಲು ಬಯಸುವಿರೋ? ಚೆನ್ನಾಗಿರುವ ಭಾವನೆ ಹೊಂದುವದಕ್ಕಾಗಿ ಕ್ರಯ ಕೊಡಲು ಸಿದ್ಧರಾಗಿರುವಿರೋ ಎಂದು ಬೇರೆ ಮಾತುಗಳಲ್ಲಿ ಕೇಳಬಹುದು.

ನಿಮ್ಮೊಂದಿಗೆ ಹೊಂದಿಕೊಂಡು ಹೋಗದಿರುವವರು ಯಾರಾದರು ಇರುವರೋ? ಆ ವ್ಯಕ್ತಿಯೊಂದಿಗೆ ನಿಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳಲು ನಿಜವಾಗಿಯೂ ನೀವು ಬಯಸುವಿರೋ? ಕ್ರಯ ಕೊಡಲು ಸಿದ್ಧರಾಗಿರುವಿರೋ? ನಿಮ್ಮ ಗರ್ವವನ್ನು ನುಂಗಿಕೊಂಡು "ನನ್ನನ್ನು ಕ್ಷಮಿಸು" ಎಂದು ಹೇಳುವಿರೋ? ಇನ್ನೊಬ್ಬನು ಮಾಡಿದ್ದು ಸರಿಯಾಗಿರಲಿ, ಇಲ್ಲದಿರಲಿ, ನೀನು ಸರಿಯಾದದ್ದನ್ನು ಮಾಡುವಷ್ಟು ದೊಡ್ಡವನಾಗಿರುವಿಯೋ? ಸೇವಕನಾಗಿರುವದನ್ನು ನೀನು ಕಲಿಯಬಹುದೋ?

ಹೆಚ್ಚು ಉತ್ತಮವಾದ ವೈವಾಹಿಕ ಜೀವನ, ಆನಂದದ ಮನೆ ಇರಬೇಕೆಂದು ಬಯಸುವಿಯೋ? ನಮಗೆ ಬೇಕೆಂದು ಬಯಸುತ್ತೇವೆ. ಆದರೆ ಸಾಮಾನ್ಯವಾಗಿ ಇದು ನಮ್ಮ ಪರವಾಗಲು ನಮ್ಮಲ್ಲಿ ಬದಲಾವಣೆಯನ್ನು ಒಳಗೊಂಡಿರುತ್ತದೆ. ಬದಲಾವಣೆಯು ನೋವನ್ನು ಒಳಗೊಂಡಿದೆ ... ಹಾಗೂ ನಾವು ನೋವನ್ನು ಸಹಿಸಲು ಬಯಸುವದಿಲ್ಲ.

ನೀನು ಅಪರಾಧದಿಂದ ತುಂಬಿರುವಿಯೋ? ಆ ಆಂತರ್ಯದ ನೋವಿನಿಂದ ಬಿಡುಗಡೆಯಾಗಲು ನೀನು ನಿಜವಾಗಿಯೂ ಬಯಸುವಿಯೋ? ದೇವರ ಎದುರಿನಲ್ಲಿ ನಿನ್ನನ್ನು ತಗ್ಗಿಸಿಕೊಳ್ಳಲು ಮತ್ತು ಆತನ ಚಿತ್ತಕ್ಕೆ ನಿನ್ನನ್ನು ಇಡಿಯಾಗಿಯೂ ಸಂಪೂರ್ಣವಾಗಿಯೂ ಸಮರ್ಪಿಸಿ ಕೊಳ್ಳಲು ಸಿದ್ಧನಾಗಿರುವಿಯೋ? ನಿನ್ನ ಪಾಪಗಳ ಬಗ್ಗೆ ಹೃದಯದಲ್ಲಿ ನೋವುಳ್ಳವನಾಗಿರುವಿಯೋ ಮತ್ತು ನಿನ್ನ ಜೀವನ ಮಾದರಿಯನ್ನು ಬದಲಾಯಿಸಲು ಸಿದ್ಧನಾಗಿರುವಿಯೋ (ಅವನನ್ನು ಸತ್ಯವೇದವು "ಮಾನಸಾಂತರ" ಎಂದು ಕರೆಯುತ್ತದೆ)? ಪಾಪಗಳ ಪರಿಹಾರಕ್ಕಾಗಿ (ನೀರಿನಲ್ಲಿ) ಬಾಪ್ತಿಸ್ಮ ಹೊಂದಿರದಿದ್ದರೆ (ಅ.ಕೃ. 2:38) ಅದನ್ನು ಹೊಂದಲು ಸಿದ್ಧನಿರುವಿಯೋ? ನೀನು ದೇವರ ಮಗುವಾಗಿದ್ದು ಪಾಪಮಾಡಿದರೆ, ದೇವರ ದಯಗೆ ನಿನ್ನನ್ನು ಒಪ್ಪಿಸಿಕೊಳ್ಳಲು ಮನಸ್ಸುಳ್ಳವನಾಗಿರುವಿಯೋ (1 ಯೋಹಾನ 1:9)? ನಿನ್ನ ಕೃತ್ಯಗಳು ನಿನ್ನ ಪ್ರಭಾವಕ್ಕೆ ನೋವು ಕೊಟ್ಟಿದ್ದರೆ, ಅದನ್ನು ಬಹಿರಂಗವಾಗಿ ಅರಿಕೆಮಾಡಿ ನೂತನವಾಗಿ ಪ್ರಾರಂಭಿಸಲು ಸಿದ್ಧನಾಗಿರುವಿಯೋ (ಯಾಕೋಬ 5:16)? ಕ್ರಯ ಕೊಡಲು ಸಿದ್ಧನಾಗಿರುವಿಯೋ?

ನಿಮ್ಮ ಸಮಸ್ಯೆಯು ಯಾವುದೇ ಇರಬಹುದು. ನೀವು ಆತನಿಗೆ ಅವಕಾಶ ಕೊಟ್ಟರೆ, ನೀವು ಕ್ರಯ ಕೊಡಲು ಸಿದ್ಧರಾಗಿದ್ದರೆ ಆತನು ನಿಮಗೆ ಸಹಾಯಮಾಡಬಲ್ಲನು. ಯೇಸುವನ್ನು ನೋಡು. ಸರಿಯಾದದ್ದನ್ನು ಮಾಡಲು ಪ್ರಯತ್ನಿಸು. ಕೊಳದ ಬಳಿಯಲ್ಲಿ ಇದ್ದವನು ಪ್ರಯತ್ನಿಸಿದಾಗ ಯೇಸು ಅವನಿಗೆ ಎದ್ದು ನಡೆದಾಡಲು ಬಲವನ್ನು ಕೊಟ್ಟನು. ನೀನು ಒದಗಿಸಲಾರದ್ದನ್ನು ಯೇಸು ಒದಗಿಸುವನೆಂದು ನಂಬು.

ಯೇಸು ನಮ್ಮ ದೇಹಗಳನ್ನೂ ಮನಸ್ಸುಗಳನ್ನೂ ಆತ್ಮಗಳನ್ನೂ ಗುಣಪಡಿಸ ಬಲ್ಲನು.

## ಮುಕ್ತಾಯ

ಯೇಸು ಯಾವಾಗಲೂ ಹೆಚ್ಚಾಗಿ ಆತ್ಮದ ಬಗ್ಗೆ ಚಿಂತಿಸುವನಾಗಿದ್ದಾನೆ. "ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪ ಮಾಡಬೇಡ. ನಿನಗೆ ಹೆಚ್ಚಿನ ಕೇಡು ಬಂದೀತು" (ವ. 14) ಎಂದು ಆ ಮನುಷ್ಯನಿಗೆ ಹೇಳಿದನು. ಈಗಲೇ ಯೇಸು ನಮ್ಮ ಪ್ರಾಣಗಳನ್ನು ಗುಣಪಡಿಸಲು ಬಯಸುತ್ತಾನೆ. ನಾವು ಎದ್ದು ಆತನೊಂದಿಗೆ ನಡೆಯ ಬೇಕೆಂದು ಕರೆಯುತ್ತಾನೆ. ಆದರೆ ನಾವೆಲ್ಲಿರುವೆವೋ ಅಲ್ಲಿಯೇ ಇರಬಹುದು. "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದು ಯೇಸು ಆ ಮನುಷ್ಯನಿಗೆ ಹೇಳಿ ದಾಗ ಅವನು ಹಾಗೆ ಮಾಡಬೇಕಾಗಿರಲಿಲ್ಲ. ಅವನಿಗೆ ಆಯ್ಕೆ ಇತ್ತು. ಅವನು ಅಲ್ಲಿಯೇ ಬಿದ್ದುಕೊಂಡಿರುವದನ್ನು ಆಯ್ದುಕೊಳ್ಳಬಹುದಿತ್ತು. ಆ ಭಯಂಕರವಾದ ಸ್ಥಿತಿಯಲ್ಲಿ ಅಂತಿಮವಾಗಿ ಅವನು ಸತ್ತು ಹೋಗಬಹುದಿತ್ತು. ಯೇಸುವು ನಮ್ಮನು ಕರೆಯುವಾಗ ನಮಗೂ ಒಂದು ಆಯ್ಕೆಯಿದೆ. ನಾವು ನಮ್ಮ ಹಾಸಿಗೆಯ ಮೇಲೆ ಇದ್ದು ಏನು ಮಾಡದಿದ್ದರೆ ಅದು ಆರಾಮದಾಯಕವಾದದ್ದಾಗಿರ ಬಹುದು: ಆದರೆ ನಾವು ಮಾಡಿದರೆ, ನಾವೆಂದೂ ಸ್ವಸ್ಥರಾಗುವದಿಲ್ಲ. ತೀರ್ಮಾನವು ನಮ್ಮದು.

ಫರಿಸಾಯರಂತೆ ನಾವಾಗದಿರಲು ದೇವರು ಸಹಾಯ ಮಾಡಲಿ. ನಮ್ಮ ಸಂಪ್ರದಾಯಗಳನ್ನೂ ದುರಾಗ್ರಹಗಳನ್ನೂ ಆತನು ತೆಗೆದು ಹಾಕಲಿ. ನಮ್ಮನ್ನು ಕರ್ತನಿಗೆ ಸಮರ್ಪಿಸಿ ಕೊಳ್ಳೋಣ. ಆತನು ನಮ್ಮನ್ನು ಸ್ವಸ್ಥಪಡಿಸುವನು.

ನಿಜವಾಗಿಯೂ ನಿನಗೆ ಸ್ವಸ್ಥನಾಗಲು ಮನಸ್ಸಿದೇಯೋ? ನಿನ್ನ ಪ್ರತಿಕ್ರಿಯೆಯು ನಿನ್ನ ಉತ್ತರವನ್ನು ಸೂಚಿಸುವುದು.

---

ಟಿಪ್ಪಣಿಗಳು

[1]ಕೆಲವು ಮೂಲ ಪ್ರತಿಗಳಲ್ಲಿ "ಹಬ್ಬ" (the feast) ಎಂದಿದೆ. ಅದು ಸರಿಯಾಗಿದ್ದರೆ "ಹಬ್ಬ" ಬಹುಶಃ ಪಸ್ಕ ಹಬ್ಬಕ್ಕೆ ಸಂಬಂಧಿಸಿದೆ. [2]"ಯೇಸುವು ದೇವಾಲಯಕ್ಕೆ ಹೋಗುವದನ್ನು ಮೆಚ್ಚಿಕೊಳ್ಳುತ್ತಿದ್ದನು" ಎಂದು ಕೆಲವರು ಹೇಳಬಹುದು. [3]"ಕುರಿ ಮಾರ್ಕೆಟ್" ಎಂದು KJV ಯಲ್ಲಿದೆ. [4]ಅವು KJVಯಲ್ಲಿ "ಮಂಟಪಗಳು" ಎಂದು ಕರೆಯಲ್ಪಟ್ಟಿವೆ. [5]ಈ ಮಾತುಗಳು ಭಾಗ ವಾಗಿಯಾಗಲೀ, ಇಡಿಯಾಗಿ ಆಗಲೀ ಅನೇಕ ಪುರಾತನ ಮೂಲ ಪ್ರತಿಗಳಲ್ಲಿ ದೊರೆಯುತ್ತವೆ. ಆದರೆ ಅತೀ ಪುರಾತನ ಮತ್ತು ಅತ್ಯುತ್ತಮವಾದ ಪ್ರತಿಗಳಲ್ಲಿ ಇರುವದಿಲ್ಲ. [6]ದಿನದ ಸಮಯ ದಲ್ಲಾದರೂ ಅವನೊಂದಿಗಿರಲು ಸ್ನೇಹಿತರು ಯಾರೂ ಇರಲಿಲ್ಲ (ವ. 7). ಪ್ರತಿದಿನ ಕೊಳದ ಸಮೀಪ ಬರಲು ಯಾರಾದರೂ ಅವನಿಗೆ ಸಹಾಯ ಮಾಡುತ್ತಿರಬೇಕು. [7]ಮಾತುಗಳನ್ನು ಹೇಳು ತ್ತಿದ್ದಾಗ ಯೇಸುವಿನ ಮನಸ್ಸಿನಲ್ಲಿ ಜನರ ಗುಂಪು ಇದ್ದಿರಬಹುದು - ಬಹುಶಃ ಆತನನ್ನು ಟೀಕಿಸು ತ್ತಿರುವವರು ಇರಬಹುದು. [8]ನೀರು ಉಕ್ಕುವಾಗ ಗುಣಪಡಿಸುವ ಶಕ್ತಿಯ ಬಗ್ಗೆ ಕೆಲವೊಂದು ಮೂಢನಂಬಿಕೆ ಯಿತ್ತೆಂಬುದನ್ನು ಆ ಮನುಷ್ಯನ ಉತ್ತರ ಸೂಚಿಸುತ್ತದೆ. KJVಯಲ್ಲಿ ಯೋಹಾನ 5:3ಬಿ, 4ರಲ್ಲಿಯ ಪುರಾತನ ಮಾತುಗಳು ಹೇಗೋ ಒಳ್ಳೆಯ ವಿವರಣೆಗಳಾಗಿದೆ. [9]ಸಬ್ಬತ್ ದಿನದಲ್ಲಿ ಭಾರವನ್ನು ಹೊರಬಾರದೆಂದು ಹಳೆ ಒಡಂಬಡಿಕೆ ಹೇಳುತ್ತಿತ್ತು (ಯೆರೆಮೀಯ 17:19-27; ನೆಹಮೀಯ 13:15-19). ಆದರೆ ನೆಹಮೀಯ 13:15 ಸಬ್ಬತ್ ದಿನದಂದು ವ್ಯಾಪಾರದ ಬಗ್ಗೆ ಸ್ಪಷ್ಟಪಡಿಸುತ್ತದೆ. [10]ಉಪಯೋಗಿಸಿದ ಕಾಲವು ಇದು ಸ್ಥಿರವಾಗಿದ್ದ ಪರಿಸ್ಥಿತಿಯೆಂದು ಸೂಚಿಸ್ತುತ್ತದೆ.

[11] "ಯೇಸುವು ಉತ್ತರವಾಗಿದ್ದಾನೆ" ಎಂಬ ಪಾಠವನ್ನು ನೋಡಿ. [12]ಡೇವಿಡ್ ಡೆನ್‌ಮಾನ.

© 2009 Truth for Today